CC 20/2025
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 23.08.2025.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯ ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಕೆ ಎಸ್ ಕೆ ವಕೀಲರಿಂದಃ**

ನಾನು ಬಿ ಬಿ ಎಂ ವ್ಯಾಸಂಗ ಮಾಡಿರುತ್ತೇನೆ. ದೂರು ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ಆರೋಪಿಯನ್ನು ಮೊದಲು ಸಾಗರದಲ್ಲಿ ನೋಡಿದ್ದೆ. ಆರೋಪಿಯು ನನಗೆ ನನ್ನ ಸ್ನೇಹಿತ ವಿಜಯ್ ಕುಮಾರ್ ಮೂಲಕ ಪರಿಚಯ ಆಗಿರುತ್ತಾರೆ. ವಿಜಯ್ ಕುಮಾರ್ ಎನ್ನುವವರು ಸಾಗರದ ವಿಶ್ವಂ ಫೈನಾನ್ಸ್ ನ ಒಬ್ಬ ಪಾಲುದಾರರು ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಸಾಗರದ ವಿಶ್ವಂ ಫೈನಾನ್ಸ್ ನ ಒಬ್ಬ ಪಾಲುದಾರ ಎಂದರೆ ಸರಿಯಲ್ಲ. ನಾನು, ಸುರೇಶ್, ವಿಜಯ್ ಕುಮಾರ್ ಮತ್ತು ವಿನೋದ್ ಕುಮಾರ್ ಎನ್ನುವವರು ಸಾಗರದ ವಿಶ್ವಂ ಫೈನಾನ್ಸ್ ನ ಪಾಲುದಾರರು ಇರುತ್ತೇವೆ ಎಂದರೆ ಸರಿಯಲ್ಲ. ವಿಶ್ವಂ ಫೈನಾನ್ಸ್ ನ ದಾಖಲೆಗಳನ್ನು ನ್ಯಾಯಾಲಯದ ಮೂಲಕ ತರಿಸಿಕೊಳ್ಳಲು ನನಗೆ ಯಾವುದೇ ತೊಂದರೆ ಇಲ್ಲ. ಆರೋಪಿಯು ನನಗೆ 2-3 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿಯು ಅವರ ಗಂಡನ ಜೊತೆ ಸಾಗರದಲ್ಲಿ ಇರುವ ನನ್ನ ಸ್ನೇಹಿತನ Inventors Office ಗೆ ಬಂದಿದ್ದರು. ನನ್ನ ಸ್ನೇಹಿತ ಎಂದರೆ ಮೇಲೆ ಹೇಳಿದ ವಿಜಯ್ ಕುಮಾರ್ ಇರುತ್ತಾರೆ. ಆರೋಪಿಯು ಗೃಹಿಣಿ ಇರುತ್ತಾರೆ. ಆರೋಪಿಯ ಫೋನ್ ನಂಬರ್ ನನಗೆ ಗೊತ್ತಿಲ್ಲ. ಆರೋಪಿಯ ಮನೆ ಸಾಗರದಿಂದ 5-6 ಕಿ.ಮೀ ಅಂತರದಲ್ಲಿ ಇರಬಹುದು. ನಾನು ಆರೋಪಿಯ ಮನೆಗೆ ಹೋಗಿಲ್ಲ. ಆರೋಪಿಯು ಮಾರ್ಚ್ ಮೊದಲ ವಾರದಲ್ಲಿ ನನಗೆ ಹಣ ಕೇಳಿದ್ದರು. ದಿನಾಂಕ ನನಗೆ ನೆನಪಿಲ್ಲ. ಆರೋಪಿಗೆ 6 ಲಕ್ಷ ಹಣ ಬೇಕು ಎಂದು ಶ್ರೀಕಾಂತ್ ಎನ್ನುವವರು ನನಗೆ ಫೋನ್ ಮೂಲಕ ಮಾತನಾಡಿದ್ದರು. ಆರೋಪಿಯು ನನಗೆ ಹಣ ಕೇಳಿಲ್ಲ ಎಂದರೆ ಸರಿ. ಆರೋಪಿಗೆ ಹಣವನ್ನು ನಾನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಆರೋಪಿ ಮತ್ತು ಅವರ ಗಂಡ ಹಣ ತೆಗೆದುಕೊಳ್ಳಲು ಬಂದಿದ್ದರು. ಆ ಹಣವನ್ನು ನಾನು ಆರೋಪಿಯ ಕೈಗೆ ಕೊಟ್ಟಿರುತ್ತೇನೆ. ಆರೋಪಿಗೆ ನಾನು ಹಣವನ್ನು ಯಾವಾಗ ಕೊಟ್ಟೆ ಎನ್ನುವ ದಿನಾಂಕವನ್ನು ನನ್ನ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ಆರೋಪಿಗೆ ಹಣ ಕೊಟ್ಟ ಬಗ್ಗೆ ನಾನು ಯಾವುದೇ ದಾಖಲೆಯನ್ನು ಬರೆಸಿಕೊಂಡಿಲ್ಲ. ಆದರೆ ಭದ್ರತೆಗಾಗಿ ಚೆಕ್ಕನ್ನು ಕೊಡುವಂತೆ ಕೇಳಿದ್ದೆ. ಆರೋಪಿಯು 6 ತಿಂಗಳ ನಂತರ ಹಣ ಕೊಡುತ್ತೇನೆ ಎಂದು ಹೇಳಿದ್ದರು. ನಾನು 6 ತಿಂಗಳು ಬಿಟ್ಟು ಹಣ ಕೊಡುವಂತೆ ಆರೋಪಿಗೆ ಫೋನ್ ಮೂಲಕ ಕೇಳಿದ್ದೆ, ಆಗ ಆರೋಪಿಯು ಒಂದು ತಿಂಗಳು ಬಿಟ್ಟು ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ಹೇಳಿದ್ದರು. ನಾನು ಆರೋಪಿಗೆ 6 ತಿಂಗಳು ಬಿಟ್ಟು ಯಾವ ದಿನಾಂಕದಂದು ಫೋನ್ ಮಾಡಿದ್ದೆ ಎಂದು ದಿನಾಂಕ ನೆನಪಿಲ್ಲ. ಆರೋಪಿಗೆ ಮಾರ್ಚ್ ಮೊದಲ ವಾರದಲ್ಲಿ ಹಣ ಕೊಟ್ಟಿರುತ್ತೇನೆ ಎಂದು ಹೇಳುವ 15 ದಿನ ಮೊದಲು ಹಣ ಬೇಕು ನನಗೆ ಕೇಳಿದ್ದರು. 15 ದಿನ ಮೊದಲು ಹಣ ಬೇಕು ಎಂದು ನನಗೆ ಆರೋಪಿಯು ಕೇಳಿದ್ದರು ಎನ್ನುವ ಬಗ್ಗೆ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ರೂ.500/- ಮುಖಬೆಲೆಯ 1200 ನೋಟುಗಳನ್ನು ಕೊಟ್ಟಿದ್ದೆ. ಸದರಿ ವಿಷಯವನ್ನು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ನಾನು ವ್ಯವಸಾಯ ಮತ್ತು ಖಾಸಗಿ ಕೆಲಸವನ್ನು ಮಾಡುತ್ತಿದ್ದು ಅದರ ಉಳಿತಾಯದಿಂದ ನಾನು ಸದರಿ ಹಣವನ್ನು

ಕೊಟ್ಟಿರುತ್ತೇನೆ. ನಾನು 500/- ಮುಖಬೆಲೆಯ ನೋಟುಗಳನ್ನು ಉಳಿತಾಯ ಮಾಡಿ ಮನೆಯಲ್ಲಿ ಇಟ್ಟಿದ್ದೆ. ನಾನು ವ್ಯವಸಾಯ ಮಾಡುತ್ತೇನೆ ಎಂದು ತೋರಿಸುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಶಿವಮೊಗ್ಗದಲ್ಲಿ ಕಾಲ್ ಸೆಂಟರ್ ನಲ್ಲಿ ಮ್ಯಾನೇಜರ್ ಎಂದು ಕೆಲಸ ಮಾಡುತ್ತೇನೆ. ನಾನು ಕಾಲ್ ಸೆಂಟರ್ ನಲ್ಲಿ ಮ್ಯಾನೇಜರ್ ಎಂದು ಕೆಲಸ ಮಾಡುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

ಆರೋಪಿಯು ಬೇಕರಿ ವ್ಯವಹಾರಕ್ಕೆಂದು ನನ್ನ ಬಳಿ ಹಣ ಕೇಳಿದ್ದರು. ಆರೋಪಿಯು ಎಲ್ಲಿ ಬೇಕರಿ ವ್ಯವಹಾರ ಮಾಡುತ್ತಾರೆ ಎಂದು ನಾನು ಪರಿಶೀಲಿಸಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**